[ Govt. of Karnataka C.R.P. 67]

| Deposition Sheets (RP.No.57) Form No.4 |
|---|

**IN THE COURT OF PRL. CIVIL JUDGE & J.M.F.C., KARKALA.**

**Criminal Case No. 536/2024**

ಪಿಡ್ಲ್ಯೂಃ 2 ಸಿಡ್ಲ್ಯೂಃ 3

ಸಾಕ್ಷಿದಾರಳ ಹೆಸರು : ನಿಸರ್ಗ

ತಂದೆಯ ಹೆಸರು : ನಾಗೇಶ್

ಪ್ರಾಯ : 15 ವರ್ಷ

ಉದ್ಯೋಗ : ವಿದ್ಯಾರ್ಥಿ

ವಾಸ : ಅಂಕೋಲ

ದಿನಾಂಕ 23.04.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ನ್ಯಾಯಾಲಯದ ಮುಂದೆ ಇವ ಆರೋಪಿಯನ್ನು ನೋಡಿ ಗುರುತಿಸಿದ್ದೇನೆ.

ಚಾಸಾ-**1** ರವರ ಪರಿಚಯ ಇದೆ ಅವರು ನನ್ನ ಶಿಕ್ಷಕಿ, ಚಾಸಾ-**2** ಮತ್ತು **4** ರವರ ನನಗೆ ಪರಿಚಯ ಇದೆ, ಅವರು ನನ್ನ ಶಾಲೆಯ ಸಹಪಾಠಿ, ಚಾಸಾ-**5, 6** ಮತ್ತು **7** ರವರ ಪರಿಚಯ ಇಲ್ಲ. ಚಾಸಾ-**8, 9, 10** ಶಾಲೆಯಲ್ಲಿ ಶಿಕ್ಷಕಿ, ಚಾಸಾ-**11** ಕ್ಲರ್ಕ್.

ದಿಃ**19.12.2023** ರಂದು ನನ್ನ ಶಾಲೆಯ ಒಟ್ಟು **43** ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಪ್ರವಾಸಕ್ಕೆಂದು ಕೆ ಎಸ್ ಆರ್ ಟಿ ಸಿ ಬಸ್ಸಿ ನಲ್ಲಿ ಹಾರವಾಡದಿಂದ ಚಿಕ್ಕಮಂಗಳೂರು ,ಶೃಂಗೇರಿ, ಹೊರನಾಡು ಕಡೆಗೆ ಹೊರಟಿದ್ದೇವು. ಮರುದಿನ ಮಧ್ಯಾಹ್ನ **3.30** ಗಂಟೆಗೆ ಶೃಂಗೇರಿಯಿಂದ ವಾಪಸ್ಸು ಬರುವಾಗ ಸಂಜೆ **5.30** ಗಂಟೆಗೆ ಕಾರ್ಕಳದ ಮಾಳ ಎಂಬ ಜಾಗದಲ್ಲಿ ಅಪಘಾತವಾಗಿತ್ತು. ನಮ್ಮ ಬಸ್ಸಿನ

ಚಾಲಕನಾದ ಆರೋಪಿ ಅತೀವೇಗವಾಗಿ ಮತ್ತು ಅಜಾಗರೂಕತೆಯಿಂದ ಚಲಾಯಿಸಿ ಮರಕ್ಕೆ ಢಿಕ್ಕಿ ಹೊಡೆದಿರುತ್ತಾರೆ. ಢಿಕ್ಕಿ ಹೊಡೆದ ಪರಿಣಾಮ ನನಗೆ, ಚಾಸಾ-2, ಮತ್ತು 4 ರವರಿಗೆ ಪೆಟ್ಟಾಗಿ ರಕ್ತ ಸುರಿಯುತ್ತಿತ್ತು, ಬಸ್ಸಿ ನಲ್ಲಿದ್ದ ಉಳಿದವರಿಗೆ ಏನು ಆಗಿರುವುದಿಲ್ಲ. ನಮ್ಮನ್ನು ಚಿಕಿತ್ಸೆ ಕುರಿತು ಚಾಸಾ-9 ರವರು ಕಾರ್ಕಳದ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿರುತ್ತಾರೆ.

ಈ ಅಪಘಾತಕ್ಕೆ ಆರೋಪಿಯ ಅತೀವೇಗ ಮತ್ತು ಅಜಾಗರೂಕತೆಯ ಚಲಾನೆಯೇ ಕಾರಣವಾಗಿರುತ್ತದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ವಿಚಾರಣೆ ಮಾಡಿ ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಈಗ ನನಗೆ ತೋರಿಸಿದ ನಿಪಿ-2 ರಿಂದ 5 ಫೋಟೋಗಳಲ್ಲಿ ಸದ್ರಿ ಅಪಘಾತಕ್ಕೊಳಗಾದ ಕೆ ಎಸ್ ಆರ್ ಟಿ ಸಿ ಬಸ್ಸನ್ನು ನೋಡಿ ಗುರುತಿಸಿದ್ದೇನೆ.

<u>ಪಾಟೀ ಸವಾಲು :</u> ಆರೋಪಿ ಪರ : ಶ್ರೀ ಹೆಚ್ ಆರ್ ಕೆ ವಕೀಲರಿಂದಃ

ಉತ್ತರ ಕನ್ನಡ ಜಿಲ್ಲೆಯ ಅಂಕೋಲ ತಾಲೂಕಿನ ಹಾರವಾಡ್ ಸರಕಾರಿ ಶಾಲೆಯಿಂದ ಮಕ್ಕಳು ಹಾಗೂ ಶಿಕ್ಷಕರು ದಿಃ 19.12.2023 ರಂದು ಬೆಳಿಗ್ಗೆ 6.00 ಗಂಟೆಗೆ ಪ್ರವಾಸಕ್ಕೆಂದು ಹೊರಟಿದ್ದೇವು ಎಂದರೆ ಸರಿ. ಆ ದಿನ ನಾವು ಉಡುಪಿ ಕೃಷ್ಣ ಮಠ ನೋಡಿ ಕಾರ್ಕಳ ಗೋಮಟೇಶ್ವರ ಬೆಟ್ಟಕ್ಕೆ ಬಂದು ನಂತರ ವಾಪಸ್ಸು ಉಡುಪಿಗೆ ಹೋಗಿರುತ್ತೇವೆ. ಆ ದಿನ ಆರೋಪಿಯೇ ಬಸ್ಸನ್ನು ಚಲಾಯಿಸಿರುತ್ತಾರೆ. ಆರೋಪಿಯು ನಿಧಾನವಾಗಿ ನಮ್ಮನ್ನು ಎಲ್ಲಾ ಕಡೆ ಕರೆದುಕೊಂಡು ಹೋಗಿರುತ್ತಾರೆ.

ಮರುದಿನ ಬೆಳಗ್ಗಿನ ಜಾವ 6.00 ಗಂಟೆಗೆ ನಾವು ಹೊರನಾಡು, ಶೃಂಗೇರಿ ಕುದುರೆಮುಖ ನೋಡಲು ಹೊರಟೆವು. ಹೊರನಾಡು, ಶೃಂಗೇರಿ ಕುದುರೆಮುಖ ಘಾಟ್ ಪ್ರದೇಶವಾಗಿ ತಿರುವಿನಿಂದ ಕೂಡಿದೆ. ನಾನು ಚಾಲಕನ ಸೀಟಿನ ಹಿಂಬದಿಯ 3 ಸೀಟಿನಲ್ಲಿ ಕುಳಿತುಕೊಂಡಿದ್ದೆ. ನಾನು ಚಾಲಕನ ಹಿಂದಿನ ಸೀಟಿನಲ್ಲಿ ಕುಳಿತ್ತಿದ್ದ ಕಾರಣ ನನಗೆ ಎದುರಿನ ರಸ್ತೆ ಕಾಣುತ್ತಿತ್ತು . ಸ್ಥಳ ಮಹಜರ್ ನಕಾಶೆಯಲ್ಲಿ ತೋರಿಸಿದ ರಸ್ತೆ ಸಿಂಗಲ್ ರಸ್ತೆ ಎಂದರೆ ಸರಿ. ಆ ದಿನ ನಾನು ಕುಳಿತ್ತಿದ್ದ ಸೀಟಿನಲ್ಲಿ ನನ್ನ ಎಡಭಾಗದಲ್ಲಿ ಚಾಸಾ-2 ರವರು ಕುಳಿತ್ತಿದ್ದು ಮತ್ತು ನನ್ನ ಹಿಂದೆ ಚಾಸಾ-4 ರವರು ಕುಳಿತ್ತಿದ್ದರು.

ಅಪಘಾತ ಪೂರ್ವದಲ್ಲಿ ಬಸ್ಸು ಎಷ್ಟು ಕಿ ಮೀ ವೇಗದಲ್ಲಿ ಚಲಿಸುತ್ತಿತ್ತು ಎಂದು ನನಗೆ ಹೇಳಲು ಆಗುವುದಿಲ್ಲ. ಮಾಳ ಪ್ರದೇಶ ಏರು ತಗ್ಗಿನಿಂದ ಕೂಡಿದ್ದು ಘಾಟಿ ಪ್ರದೇಶ ಎಂದರೆ ಸರಿ. ಅಪಘಾತ ಪೂರ್ವದಲ್ಲಿ ನಮ್ಮ ಎದುರಿನಿಂದ ಯಾವುದೇ ವಾಹನ ಬರುತ್ತಿರಲಿಲ್ಲ. ಎದುರಿನಿಂದ ಲಾರಿಯು ಅತೀವೇಗದಿಂದ ಬಂದ ಕಾರಣ ಅಪಘಾತವನ್ನು ತಡೆಯಲು ನಮ್ಮ ಬಸ್ಸು ಮರದ ಕಡೆಗೆ ತಿರುಗಿತು ಎಂದರೆ ಸರಿಯಲ್ಲ.

ಅಪಘಾತ ನಡೆದ ನಂತರ ನಮ್ಮನ್ನು ಕಾರ್ಕಳ ಸರಕಾರಿ ಆಸ್ಪತ್ರೆಗೆ ಚಿಕಿತೆಗಾಗಿ ಕರೆದುಕೊಂಡು ಹೋಗಿದ್ದು ನಾವು ಅಲ್ಲಿ 2 -3 ತಾಸು ಇದ್ದೇವು. ದಿಃ20.12.2023 ರಂದು ವಾಪಸ್ಸು ಹೊರಟು ದಿಃ21.12.2023 ರಂದು ಮನೆಗೆ ತಲುಪಿದೇವು. ತದನಂತರ ಕಾರ್ಕಳಕ್ಕೆ ಬಂದಿರುವುದಿಲ್ಲ. ಇವತ್ತೆ ಬಂದಿರುತ್ತೇನೆ. ದಿಃ20.12.2023 ರಂದು ಆಸ್ಪತ್ರೆಯಲ್ಲಿದ್ದಾಗ ನನ್ನನ್ನು ಪೊಲೀಸರು ವಿಚಾರಣೆ ಮಾಡಿರುತ್ತಾರೆ ಮತ್ತು ದಿಃ21.12.2023 ರಂದು ಮತ್ತೆ ವಿಚಾರಣೆ ಮಾಡಿರುತ್ತಾರೆ.

ದಿಃ19.12.2023 ಮತ್ತು 20.12.2023 ರಂದು ಆರೋಪಿಯು ಅತೀವೇಗವಾಗಿ ಚಲಾನೆ ಮಾಡಿರುತ್ತಾರೆ. ಸದ್ರಿ ಅಪಘಾತದಿಂದ ನನಗೆ ಪೆಟ್ಟಾಗಿದ್ದು ವಾರ್ಷಿಕವಾಗಿ ನನ್ನ ವಿದ್ಯಾಭ್ಯಾಸಕ್ಕೆ ತೊಂದರೆಯಾಗಿರುವುದಿಲ್ಲ. ಮುಂದುವರಿದ 1-2 ವಾರ ಶಾಲೆಗೆ ಹೋಗಿರುವುದಿಲ್ಲ. ಆರೋಪಿಯು ನಮ್ಮನ್ನು ಪ್ರವಾಸಕ್ಕೆ ನಿಧಾನವಾಗಿ ಕರೆದುಕೊಂಡು ಹೋಗಿದ್ದಾರೆ ಎಂದರೆ ಸರಿಯಲ್ಲ. ಒಂದು ವೇಳೆ ಎದುರಿನಿಂದ ಲಾರಿ ಬಂದು ಢಿಕ್ಕಿಪಡಿಸಿದ್ದರೆ ನಮಗೆ ತೀವ್ರ ತರಹದ ರಕ್ತಗಾಯವಾಗಿ ಪೆಟ್ಟಾಗುತ್ತಿತ್ತು ಎಂದರೆ ಸರಿ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ

Learned APP filed memo praying to issue s/s to the CW 4 to 17. As the eye witness Pw to 3 have completly turned hostile to the case of prosecution. No purpose will be served by

issuance of summons to CW 4 to 17. Hence by rejecting the prayer of learned APP evidence of CW 4 to 17 are dropped and closed prosecution side evidence and posted for 313 statement.

As there are no incriminating evidences against the accused recording of 313 statement is dispensed. Posted for compliance and Arguments.

Call on 28-02-2024.

Prl. Civil Judge & JMFC.
Karkala

Accused absent. E.P filed and allowed for a day. CW1 to 3 present and examined as PW1 to 3 and got marked Ex.P1 and 12. and 1(a) to 4(a,. 9(a)

Learned APP filed memo, praying to issue s/s to the CW4 to 17. As the eye witness and victim witness CW1 to 3 have completly turned hostile to the case of

prosecution and the parties are relatives and submitted the matter is settled b/w the .Hence no purpose will be served by issuance of summons to CW4 to 17. Who are hearsay witness, mahazar witness and official witness. Hence by rejecting the prayer of learned APP. Evidence of CW4 to 17 are dropped and closed prosecution side evidence and posted for 313 statement.

As there are no incriminating evidences against the accused recording of 313 statement is dispensed and posted for compliance Under 437A and Arguments.

Call on : 17.08.2021

Prl. Civil Judge & JMFC.
Karkala